
# ಪೂರ್ಣವಿರಾಮ


ಕಲೆ: ಡಿ.ಕೆ. ರಮೇಶ್

ಅಲ್ಪವಿರಾಮ ಅರ್ಧವಿರಾಮದಲ್ಲಿಯೇ
ಹಾದಿ ಬಸವಳಿಯುತ್ತಿದೆ
ಸಾಲು ಗಮ್ಯ ಸೇರುವ ಲಕ್ಷಣವೇ
ಕಾಣುತ್ತಿಲ್ಲವಲ್ಲೇ...
ಗೆಳತಿ ತಕರಾರು ಎತ್ತಿದರೂ
ನಾನು ಚುಕ್ಕಿ ಇಡುವುದರಲ್ಲಿ ಮಾತ್ರ ತೀರಾ
ಜಿಪುಣೆ ಅಂತ ನಕ್ಕು
ನಿಪುಣೆಯಂತೆ ಮುಂದಡಿಯಿಡುತ್ತೇನೆ.

ಪ್ರತೀ ಸಾಲಿನ ಕೊನೆಗೊಂದು
ಒಪ್ಪವಾಗಿ ಇಟ್ಟರೆ ಬಿಂದಿ,
ಅದರ ಛಾಪಿಲ್ಲದೆಯೇ ಬೆಳೆದು
ಓದನ್ನು ಸರಳಗೊಳಿಸಬಲ್ಲದಷ್ಟೆ
ಅನಂತರದ ಸಾಲು.

ಅಕ್ಷರ ಎದೆಯೊಳಗಿನ ತಿಳಿ ಬಿಂಬ
ಪೂರ್ಣವಿರಾಮ ಹಾಕಿ ಮುಂದುವರಿದ ಮೇಲೂ
ನವಿರಾಗಿ ಉಳಿಯುವುದೇ ಒಳಗಿನ ಸತ್ಯ?

ನೋವು ಕಾವು, ಪ್ರೇಮ ವಿರಹದ ಧ್ಯಾನದೊಳಗೆ
ಬಿದ್ದು ಒದ್ದಾಡುತ್ತಲೇ
ಅಡ್ಡಬೇಲಿಯ ದಾಟಿ ಸಾಗುತ್ತದೆ
ಪದ ಸಾಲಿನೊಳಗೊಂದು ಅಮೂರ್ತ
ಮೆರವಣಿಗೆ

ಎಲ್ಲ ಸಂಗತಿಗಳಿಗೂ ಚುಕ್ಕೆ ಇಟ್ಟು
ನಡೆಯಬಹುದು ನಿರಾಯಾಸವಾಗಿ
ಆದರೆ ಕವಿತೆಯಾಗುವ ಕೌತುಕದ ಕ್ಷಣಗಳಿಂದ
ವಂಚಿತರಾಗುವುದು?

ವಾಕ್ಯ ನಿಲ್ಲಿಸದೆ, ದಿಕ್ಕು ಬದಲಿಸದೆ
ನಿಯತ ಚಲನೆ ವ್ಯರ್ಥ ಅಂತ ಅನ್ನಿಸಿದರೂ
ಈಗೀಗ ನಿಮಗೂ ನಿಧಾನಕ್ಕೆ ಅರ್ಥವಾಗಿರಬಹುದು
ಕಾಯುವ ಸುಖದ ಹಿಂದಿನ ದಣಿವು!

● **ಸ್ಮಿತಾ ಅಮೃತರಾಜ್ ಸಂಪಾಜೆ**